INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -1, January--February, 2025,
PageNo,13- 19
Peer -Reviewed, Refereed Journal

# ಜೈನಧರ್ಮ ಮತ್ತು ವರ್ಧಮಾನ ಮಹಾವೀರನ ಜೀವನ–ಒಂದು ಸ್ಥೂಲನೋಟ

ಯಶವಂತಪಾಲ್ .[1]

ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ ದೇವರು ಮತ್ತು ಧರ್ಮದ ಪರಿಕಲ್ಪನೆಗಳು ಕಾಲಕಾಲಕ್ಕೆ ಅನೇಕ ಸ್ಥಿತ್ಯಂತರಗಳನ್ನು ಪಡೆದು ಸಾಗಿ ಬಂದಿದೆ ಕ್ರಿಸ್ತಪೂರ್ವ ಆರನೆಯ ಶತಮಾನವು ಜಗತ್ತಿನ ಧಾರ್ಮಿಕ ಹಾಗೂ ವೈಚಾರಿಕ ಇತಿಹಾಸದಲ್ಲಿ ಅತ್ಯಂತ ಮಹತ್ವ ಪೂರ್ಣ ಯುಗವಾಗಿದೆ ಧರ್ಮವು ಆರಂಭದಲ್ಲಿ ಸಾಮಾಜಿಕ ನೀತಿಯಾಗಿ ಕಾಣಿಸಿದಂತೆ ತೋರುತ್ತದೆ ನಂತರದ ದರ್ಶನ ಗ್ರಂಥಗಳಲ್ಲಿ ಧರ್ಮವನ್ನು ಕುರಿತು ಒಂದು ಮತಕ್ಕೆ ಸೀಮಿತಗೊಳ್ಳದೆ ಮನುಕುಲದ ಅಭ್ಯುದಯಕ್ಕೆ ಹಂಬಲಿಸಿರುವುದು ಬಹು ಮುಖ್ಯ ಅಂಶವಾಗಿದೆ ವೈಶೇಷಿಕ ದರ್ಶನದಲ್ಲಿ ಧರ್ಮವನ್ನು “ಯತೋಭ್ಯುದಯ ನಿಶ್ರೇಯ ಸಸ್ಸಿದ್ಧಿಃಸಃಧರ್ಮ” ಎಂದು ವಿವರಿಸಿದೆ ಅಂದರೆ ಯಾವುದರಿಂದ ಇಹದಲ್ಲಿ ಅಭ್ಯುದಯ ಪರದಲ್ಲಿ ಮುಕ್ತಿ ಲಭಿಸುವುದೇ ಅದೇ ಧರ್ಮ ಧರ್ಮವು ಒಂದು ನಂಬಿಕೆ ಎಂಬ ಅಭಿಪ್ರಾಯವಿದೆ.

ಭಾರತದಲ್ಲಿ ಬೆಳೆದು ಬಂದಿದ್ದ ವೈದಿಕ ಧರ್ಮ ಆರನೇ ಶತಮಾನದ ಹೊತ್ತಿಗೆ ತನ್ನ ಮೂಲ ಸರಳತೆ ಮತ್ತು ಪರಿಶುದ್ಧತೆಗಳನ್ನು ಕಳೆದುಕೊಂಡು ಅರ್ಥವಿಲ್ಲದ ಆಚಾರ ವಿಚಾರ ಸಂಸ್ಕಾರ ಮೂಢನಂಬಿಕೆ ಹಾಗೂ ಸಂಪ್ರದಾಯಗಳ ಧರ್ಮವಾಗಿ ಮಾರ್ಪಟ್ಟಿದ್ದಿತು ಸಾಮಾನ್ಯ ಜನರಿಗೆ ಎಟುಕದ ಹಾಗೂ ಅರ್ಥವಾಗದ ಈ ಆಚರಣೆಗಳು ಶ್ರಮದಾಯಕವಾಗಿದ್ದವು ಮತ್ತು ಸಾಮಾಜಿಕ ಕಟ್ಟುಪಾಡುಗಳು ಬಿಗಿಯಾಗಿ ಜಾತಿ ಭೇದ ಉಲ್ಬಣಗೊಂಡು ಆತ್ಮ ಪರಮಾತ್ಮ ಹುಟ್ಟು ಸಾವು ಮೊದಲಾದ ವಿಚಾರಗಳಿಂದ ಬದುಕು ದುಸ್ತರವಾಯಿತು ಇದೇ ಕಾಲಕ್ಕೆ ಸರಿಯಾಗಿ ಸಾಮಾನ್ಯ ಜನತೆಯ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸಲು ಧರ್ಮಸುಧಾರಕರು ಮತ್ತು ಧಾರ್ಮಿಕರು ಜನ್ಮ ತಾಳಿ ಹೊಸ ಧರ್ಮವನ್ನು ಸ್ಥಾಪಿಸಿದರು

ಹೊಸ ಮತಗಳೆ ಜೈನ ಧರ್ಮ ಬೌದ್ಧ ಧರ್ಮ ಆರನೇ ಶತಮಾನದಲ್ಲಿ ಸಾಮಾನ್ಯ ಜನರನ್ನು ಆಕರ್ಷಿಸಿದ ಧರ್ಮಗಳು ಬೌದ್ಧ ಧರ್ಮಕ್ಕಿಂತಲೂ ಪ್ರಾಚೀನವಾಗಿ ಜೈನ ಧರ್ಮವನ್ನು ಕಾಣಬಹುದಾಗಿದೆ

**[1].ಸಂಶೋಧಕರು, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ, ಮೈಸೂರು.**

24 ಜನ ತೀರ್ಥಂಕರರದಿಂದ ಕೂಡಿರುವ ಈ ಜೈನ ಧರ್ಮವು ಜ್ಞಾನ ಹಾಗೂ ವಿವೇಕ ಪ್ರಧಾನವಾಗಿದೆ ಇಲ್ಲಿ ಮನುಷ್ಯನ ಪ್ರತಿಯೊಂದು ಕಾರ್ಯದ ಒಳಿತು ಕೆಡುಕುಗಳ ನಿರ್ಣಯವು ವಸ್ತು ಸ್ವರೂಪದ ವಿಚಾರ ಮತ್ತು ಭಾವಶುದ್ಧಿಗೆ ಅನುಸರಿಸಲ್ಪಡುತ್ತದೆ.

ಜೈನ ಧರ್ಮ ಎಂದಾಗ ಜಿನನಿಗೆ ಸಂಬಂಧಿಸಿದ ಧರ್ಮ ಎಂಬ ಅರ್ಥ ಸ್ಫುರಿಸುತ್ತದೆ ತೀರ್ಥಂಕರ ಎಂಬುದು ಜೈನ ಧರ್ಮದ ಪರಿಭಾಷೆ ಯಾರು ತೀರ್ಥವನ್ನು ನಿರ್ಮಿಸುವರು ಅವರು ತೀರ್ಥಂಕರರು ಜೈನ ಪರಿಭಾಷೆಯಲ್ಲಿ ತೀರ್ಥ ಶಬ್ದಕ್ಕೆ ಧರ್ಮ ಶಾಸನ ಎಂಬ ಅರ್ಥವಿದೆ ಜಿನ ಎಂಬುದು ತೀರ್ಥಂಕರ ಎಂಬುದಕ್ಕೆ ಪರ್ಯಾಯ ನಾಮ ಜೈನ ಪರಂಪರೆಯಲ್ಲಿ 24 ತೀರ್ಥಂಕರರನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ .ಅವರ ನಾಮ ಧೇಯಗಳು ವೃಷಭನಾಥ, ಅಜಿತನಾಥ, ಸಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ, ಶೀಲನಾಥ, ಶ್ರೇಯಾಂಸ, ವಾಸು ಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರ ಭಟ್ಟಾರಕ, ಮಲ್ಲಿನಾಥ, ಮುನಿಸುವ್ರತ, ನೇಮಿನಾಥ ಪಾರ್ಶ್ವನಾಥ, ವರ್ಧಮಾನ.

ಪರಂಪರೆಯಂತೆ ವರ್ಧಮಾನ ಮಹಾವೀರನು 24ನೇ ತೀರ್ಥಂಕ ಹಾಗೂ ಕಡೆಯ ತೀರ್ಥಂಕರ ಎನಿಸಿದ ವರ್ಧಮಾನ ಮಹಾವೀರನ ಜೀವನದರ್ಶನ ಜೈನ ಸಂಸ್ಕೃತಿಯೊಂದಿಗೆ ಬೆರೆತು ಹೋಗಿರುವುದರಿಂದ ಇವನ ವ್ಯಕ್ತಿತ್ವವನ್ನು ಅರಿಯಲು ಜೈನ ಧರ್ಮ ಮತ್ತು ದರ್ಶನಗಳ ಸೂಕ್ಷ್ಮ ಅವಲೋಕನ ಅತ್ಯಂತ ಅವಶ್ಯಕವಾಗಿದೆ ಇಲ್ಲಿ ಧರ್ಮ ಎಂದರೆ ಸ್ವಭಾವವನ್ನು ತಿಳಿದುಕೊಳ್ಳುವ ಆಚರಣೆ, ಜೈನ ಧರ್ಮದಲ್ಲಿ ಮನುಷ್ಯನ ದುಃಖಗಳಿಗೆ ಮೂಲಭೂತ ಕಾರಣ ಮಾನಸಿಕಸ್ತರ ಎಂದಿದ್ದಾರೆ

**ವರ್ಧಮಾನ ಮಹಾವೀರನ ಜೀವನ**

ಮಹಾವೀರನ ಜನನ ಕ್ರಿ.ಪೂ. 599ರಲ್ಲಿ ಶುಕ್ಲ ಪಕ್ಷದ ತ್ರಯೋದಶಿಯಂದು ಕುಂಡ ಗ್ರಾಮ ಅಥವಾ ಕುಂದಾ ಗ್ರಾಮದಲ್ಲಿ ಆಯಿತೆಂದು ಈತನ ತಂದೆ ಕುಂದಾ ಗ್ರಾಮದ ರಾಜ ಸಿದ್ಧಾರ್ಥ ಈತನು ಜ್ಞಾತೃ ವಂಶದ ಕ್ಷತ್ರಿಯ ಈತನ ತಾಯಿ ತ್ರಿಶಾಲಾದೇವಿ ಲಿಚ್ಛವಿ ಮನೆತನಕ್ಕೆ ಸೇರಿದವರಾಗಿದ್ದರು ಈತನ ಬಾಲ್ಯ ಅರಮನೆಯ ಸುಖ ಸಂಪತ್ತುಗಳ ಆವರಣದಲ್ಲಿ ಕಳೆಯಿತು ಆ ಕಾಲದ ರಾಜಕುಮಾರರಿಗೆ ಯಾವ ಯಾವ ವಿದ್ಯೆಯನ್ನು ಕಲಿಸುತ್ತಿದ್ದರು ಅಂತಹ ಸಾಂಪ್ರದಾಯಿಕ ಶಿಕ್ಷಣವನ್ನ ನೀಡಿದ್ದರು. ಸಾಹಿತ್ಯ ಗ್ರಂಥಗಳಲ್ಲಿ ಮಹಾವೀರನಿಗೆ ಹಲವಾರು ಹೆಸರುಗಳು ಇರುವುದು ಕಂಡುಬರುತ್ತದೆ ಈತ ಹುಟ್ಟಿದಾಗ ತಂದೆಯ ಮನೆಯಲ್ಲಿ ಸಂಪತ್ತು ಹೆಚ್ಚಿದ್ದರಿಂದ ವರ್ಧಮಾನ ಎಂದು ಇಂದ್ರಿಯಗಳನ್ನು ಜಯಿಸಿದ್ದರಿಂದ ಮಹಾವೀರನೆಂದು ಹಾಗೂ ಸಮಸ್ಯೆಯನ್ನು ಪರಿಹರಿಸಿ ಸನ್ಮತಿ ಎಂಬ ಹೆಸರು ಪಡೆದ ಹೀಗೆ ಜ್ಞಾತಪುತ್ರ

ವೈಶಾಲಿಕ, ಶ್ರಮಣ, ಭಗವಾನ್ ಮೊದಲಾದ ಪರ್ಯಾಯ ಹೆಸರುಗಳಿದ್ದು ಒಂದೊಂದು ಹೆಸರಿಗೂ ಹಿನ್ನೆಲೆ ಇದೆ ಹೀಗಿದ್ದು ರಾಜ್ಯ ಸುಖ ರಾಜ್ಯಭಾರವನ್ನು ನಡೆಸದೆ ಆತನ ಮನಸ್ಸು ಆಧ್ಯಾತ್ಮದ ಕಡೆಗೆ ವಾಲುತ್ತದೆ ತಂದೆ ತಾಯಿಗೆ ಮಗನು ದೀಕ್ಷೆ ತೆಗೆದುಕೊಳ್ಳುವುದು ಇಷ್ಟವಿರಲಿಲ್ಲ ಹೀಗೆ ಸುಮಾರು ವರ್ಷಗಳ ಕಾಲ ಕಾದು ತನ್ನ 30ನೇ ವಯಸ್ಸಿನಲ್ಲಿ ಮಾರ್ಗಶಿರ ಕೃಷ್ಣ ದಶಮಿಯಂದು ಜಿನ ದೀಕ್ಷೆಯನ್ನು ವರ್ಧಮಾನ ಮಹಾವೀರ ಪಡೆದನು .ಅನಂತ ಸತ್ಯದ ಸಾಕ್ಷಾತ್ಕಾರಕ್ಕಾಗಿ ಭೌತಿಕ ಜೀವನದ ಎಲ್ಲಾ ಸುಖ ಭೋಗಗಳಿಂದ ಕೂಡಿದ್ದ ಸಂಸಾರವನ್ನು ತ್ಯಜಿಸಿದನು ಕ್ಷತ್ರಿಯ ಕುಂಡದ ಹೊರವಲಯದ ಉದ್ಯಾನವನಕ್ಕೆ ಹೋಗಿ ಲೋಚಮನ ಮಾಡಿಕೊಂಡನು ಮಹಾವೀರನು ಸಂಯಮ ,ಧರ್ಮದ ಪಾಲನೆ ಮಾಡುತ್ತಿದ್ದನು ತನ್ನ ತಪಸ್ವಿ ಜೀವನದಲ್ಲಿ ಜ್ಞಾತೃಪುತ್ರ ಮಹಾವೀರನು ಹಲವು ಪ್ರಾಂತಗಳಲ್ಲಿ ಅಂದರೆ ಬಿಹಾರದ ರಾಜಗೃಹ ಚಂಪಾ(ಭಾಗಲಪುರ) ವೈಶಾಲಿ ಮಿಥಿಲಾ ಕೌಶಾಂಬಿ ಕೋಸಲ ಅಯೋಧ್ಯ ಮುಂತಾದ ಸ್ಥಳಗಳು ಮೊದಲಿನ ತೀರ್ಥಂಕರರ ಜನ್ಮಸ್ಥಳ ಹಾಗೂ ತಪಸ್ಸಿನ ಸ್ಥಳಗಳಾಗಿದ್ದವು. ಹೀಗೆ ದೇಶ ಸಂಚಾರಕ್ಕೆ ಹೊರಟಾಗ ಅನೇಕ ತೊಂದರೆಗಳು ನೋವುಗಳನ್ನು ಹಿಂಸೆಗಳನ್ನು ಮಹಾವೀರರು ಅನುಭವಿಸಿದರು ಸುಮಾರು 12 ವರ್ಷಗಳ ಘೋರ ಸಾಧನೆ ಮಾಡಿದ ಮೇಲೆ ಒಂದು ದಿನ ಮಹಾವೀರನು ಜಂಬಿಯಾ ಗ್ರಾಮದ ಹೊರಗೆ ಋಜುವಾಲಿಕ ನದಿಯ ತೀರದಲ್ಲಿ ಸಾಲುವೃಕ್ಷದ ನೆರಳಲ್ಲಿ ಧ್ಯಾನ ಮಗ್ನನಾಗಿ ಕುಳಿತಾಗ ಕೇವಲ ಜ್ಞಾನ ಪ್ರಾಪ್ತವಾಯಿತು. ಅಂದು ವೈಶಾಲ ಶುಕ್ಲದ ದಶಮಿಯ ದಿನವಿದ್ದಿತು ಆ ಶುಭ ಗಳಿಗೆಯಲ್ಲಿ ಮಹಾ ತಪಸ್ವಿಯ ತಪಸ್ಸು ಫಲಿಸಿತು ಹೃದಯ ಅರಳಿ ಎಲ್ಲೆಡೆ ಬೆಳಕು ಹರಿಯಿತು ಜ್ಞಾನದ ಪ್ರವಾಹ ಹರಿಯ ತೊಡಗಿತು

**ಮಹಾವೀರನ ಉಪದೇಶಗಳು**

ಆತ್ಮವು ದೇಹದಿಂದ ಬೇರೆ ಯಾದದು ಆತ್ಮವೇ ಪರಮಾತ್ಮ ನೀನು ಸ್ವತಃ ಸತ್ಯವನ್ನು ಪಡೆದು ಅದು ನಿನ್ನ ವಶವಾಗುತ್ತದೆ ನೀನು ಅಸತ್ಯ ರೂಪದಲ್ಲಿ ಅದನ್ನು ಪಡೆಯಲಾರೆ ದುಃಖವು ಆಸೆಯ ಮೂಲದಿಂದ ಉತ್ಪನ್ನವಾಗುತ್ತದೆ (ಆಸೆಯೇ ದುಃಖಕ್ಕೆ ಮೂಲ) ದ್ವೇಷದಿಂದ ದ್ವೇಷ ವೃದ್ಧಿಸುತ್ತದೆ ಆಯುಧವು ಅಶಾಂತಿಯನ್ನು ಹೆಚ್ಚಿಸುತ್ತದೆ ಇದನ್ನು ತಿಳಿದು ಮನುಷ್ಯ ಅಶಾಂತಿಯನ್ನು ಉಂಟು ಮಾಡುತ್ತಾನೆ. ಆದುದರಿಂದ ವ್ಯಾಮೋಹವನ್ನ ಬಿಟ್ಟವನೇ ದುಃಖವನ್ನು ದಾಟುತ್ತಾನೆ ಎಂದು ಭೋದಿಸಿದರು ದ್ವೇಷದ ಪರಿಣಾಮವನ್ನು ತಿಳಿದವನಿಂದ ಮಾತ್ರ ವೈರತ್ವವನ್ನು ತ್ಯಜಿಸಲು ಸಾಧ್ಯ ಅಶಾಂತಿಯ ಭೀಕರತೆಯನ್ನು ತಿಳಿದವನೇ ಆಯುಧಗಳನ್ನು ಬಿಸಾಡುತ್ತಾನೆ ಎಂದು ಹೇಳಿದರು. ಈತನ ಪರಿಕಲ್ಪನೆಯಲ್ಲಿ ಜ್ಞಾನ ,ದರ್ಶನ, ಚಾರಿತ್ರ್ಯಗಳೆಲ್ಲ ಆತ್ಮವೆಂದಿದ್ದಾನೆ.

**ಕರ್ಮವಾದ**

ಯಾವ ರೀತಿಯ ಜೀವನವು ಕರ್ಮ ಬಂಧನದಲ್ಲಿ ಸಿಲುಕಿರುತ್ತದೆಯೋ ಅದೇ ರೀತಿ ಮುಕ್ತವೂ ಆಗಬಲ್ಲದು ಹೇಗೆ ಕರ್ಮ ಸಂಚಯದಿಂದ ಅಸಂಖ್ಯಾ ಕಷ್ಟಗಳನ್ನು ಎದುರಿಸಬೇಕಾಗುತ್ತದೆ ಅದೇ ರೀತಿ ಕರ್ಮದಿಂದ ಮುಕ್ತವಾದರೆ ಎಲ್ಲಾ ದುಃಖಗಳು ಕೊನೆಗೊಳ್ಳುತ್ತವೆ ಅಂದರೆ ವ್ಯಕ್ತಿಯು ಸಹ ತನ್ನ ಕರ್ಮಗಳಿಗೆ ತಾನೇ ಕರ್ತೃ ಅವುಗಳ ಪರಿಣಾಮಗಳನ್ನು ಸ್ವತಃ ತಾನೇ ಭೋಗಿಸಬೇಕಾಗುತ್ತದೆ. ಪ್ರಯತ್ನಗಳ ಮೂಲಕ ಸ್ವತಃ ತಾನು ಬಂಧನ ಮುಕ್ತನಾಗಬಹುದು ಬೇರೆಯವರ ಅನುಗ್ರಹ ಅಥವಾ ಪ್ರಯತ್ನಗಳಿಂದಾಗಿ ಆತ ಕರ್ಮ ಬಂಧನದಿಂದ ಮುಕ್ತನಾಗಲಾರ. ಮನುಷ್ಯನ ಸಮಸ್ತ ವಿಚಾರ ಗಳಿಗೂ ಕರ್ಮಗಳೇ ಕಾರಣವೆಂಬುದು ಆತನ ಅಭಿಪ್ರಾಯ ಹಾಗೂ ಜೀವಿಗೆ ಮನುಷ್ಯ ಜನ್ಮ ಧರ್ಮಗ್ರಹಣ ಶ್ರದ್ಧೆ ಮತ್ತು ಸಂಯಮದ ಪ್ರವೃತ್ತಿ ಈ ನಾಲ್ಕು ಉತ್ತಮ ಅಂಗಗಳು ಎಂದಿದ್ದಾರೆ.

**ಪಂಚಾಣು ವ್ರತಗಳು**

ಜೈನ ಧರ್ಮದಲ್ಲಿ ಪಂಚಾಣು ವ್ರತಗಳಿಗೆ ವಿಶೇಷ ಮಹತ್ವವಿದೆ ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹ ಎಂಬ ಐದು ವ್ರತಗಳಿವೆ

**1.ಅಹಿಂಸೆ**

ಮಹಾವೀರನು ಅಹಿಂಸೆಯ ಪ್ರತಿಪಾದಕ ಅಭಯವು ಅಹಿಂಸೆಯ ಆದಿಬಿಂದು ಮಹಾವೀರನ ಪ್ರವಚನದ ಮೂಲ ಮಂತ್ರ ಭಯಪಡಬೇಡ ಮಾನವನ ಶ್ರೇಯಸ್ಸು ಶಸ್ತ್ರಗಳ ನಿಶ್ಯಸ್ತ್ರೀಕರಣದಲ್ಲಿದೆ ಅಹಿಂಸೆಯನ್ನು ಕುರಿತು

'ಸದ್ವೇ ಪಾಣಾ ಪಿಯಾ ಉವಾ ಸುಖ ಸಾಯ ದುಕ್ಖಪಂಶೂಲಾ
ಅಪ್ಪಿಯರ ಹಾ ಪಿಯ ಜೀವಿಣೊ ಜೀವಿ ಉ ಕಾಮಾ ಸವೇಸಿ ಜೀವಿಯಂ ಪಿಬಂ'

ಅಂದರೆ ಎಲ್ಲಾ ಪ್ರಾಣಿಗಳಿಗೂ ತಮ್ಮ ಆಯುಷ್ಯಪ್ರಿಯ ಸುಖ ಎಲ್ಲರಿಗೂ ಅನುಕೂಲ ಮತ್ತು ದುಃಖ ಪ್ರತಿಕೂಲ ದುಃಖ ಎಲ್ಲರಿಗೂ ಅಪ್ರಿಯವಾದದು ಬದುಕುವುದು ಎಲ್ಲರಿಗೂ ಪ್ರಿಯ ತನ್ನ ಜೀವಿಯು ಬದುಕುವುದಕ್ಕೆ ಆಶಿಸುತ್ತದೆ ಆದ್ದರಿಂದ ಮನುಷ್ಯನಷ್ಟೇ ಪ್ರಾಣಿಗಳ ಜೀವವು ಅಮೂಲ್ಯವೆಂದು ಭಾವಿಸಿದ ಮಾನವರಿಂದ ಮೊದಲುಗೊಂಡು ಪ್ರಾಣಿ–ಪಕ್ಷಿ ಕ್ರಿಮಿ ಕೀಟಗಳವರೆಗೆ ಯಾವ ಜೀವಿಯನ್ನು ಹಿಂಸಿಸಬಾರದು ಎಂದು ಪ್ರತಿಪಾದಿಸಿದ.

**2.ಸತ್ಯ**

ತಮ್ಮ ಸ್ವಾರ್ಥಕ್ಕಾಗಿ ಭಯದಿಂದ ಯಾರಿಗಾದರೂ ಹಿಂಸೆ ಆಗುವಂತ ಅಸತ್ಯವನ್ನು ತಾವು ಹೇಳಬಾರದು. ಇನ್ನೊಬ್ಬರ ಮೂಲಕ ಹೇಳಿಸಬಾರದೆಂಬುದು ಈ ವ್ರತದ ತಿರುಳು

**3.ಬ್ರಹ್ಮಚರ್ಯ**

ಮೋಕ್ಷದ ಮೊದಲ ಸೋಪಾನ ಬ್ರಹ್ಮಚರ್ಯ ಎಂದು ಭಾವಿಸಲಾಗಿದೆ ಇದರ ಮೂಲ ಉತ್ತಮ ತಪ ನಿಯಮ ಜ್ಞಾನ ದರ್ಶನ ಚಾರಿತ್ರ ಸಂಯಮ ಮತ್ತು ವಿನಯ ಯಾವ ಪುರುಷ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವನೊ ಅವನು ಅನುಪಮ ಭಾವ ಸಂಧಿಯನ್ನು ಪಡೆಯುವನು

**4.ಅಸ್ತೇಯ**

ಕಳ್ಳತನ ಮೋಸ ವಂಚನೆಯನ್ನು ಮಾಡಬಾರದೆಂಬುದು ಈ ವ್ರತದ ಆಶಯ

**5.ಅಪರಿಗ್ರಹ**

ಸಜೀವ ಮತ್ತು ನಿರ್ಜೀವ ವಸ್ತುವನ್ನು ಯಾರು ಸ್ವಂತಕ್ಕಾಗಿ ಸಂಗ್ರಹಿಸುವರೊ ಅಥವಾ ಬೇರೆಯವರಿಂದಲೂ ಸಂಗ್ರಹಿಸುವರೊ ಅಥವಾ ಬೇರೆಯವರನ್ನು ಸಂಗ್ರಹಿಸಲು ತಮ್ಮ ಸಮ್ಮತಿ ಸೂಚಿಸುವರು ಅಂತವರು ದುಃಖದಿಂದ ಮುಕ್ತರಾಗುವುದಿಲ್ಲ. ಭೂಮಿ, ಮನೆ, ಚಿನ್ನ, ಹೆಂಡತಿ, ಸಂಬಂಧಿಕರು, ಶರೀರ ಮೊದಲಾದವು ಬಿಟ್ಟುಹೋಗುವಂತಹದೆಂಬ ಅರಿವು ಮೂಡಿಸಲು ಈ ವ್ರತಚಾರಣೆ

ಈ ರೀತಿ ಪಂಚಾಣುವ್ರತಗಳನ್ನು ಕುರಿತು ತಿಳಿಸಿದ್ದಾರೆ

ವರ್ಧಮಾನ ಮಹಾವೀರನ ಕಾಲ ನಂತರದಲ್ಲಿ ಜೈನ ಧರ್ಮವು ಕವಲೊಡೆಯಿತು ಜೈನ ಧರ್ಮವು 2 ಪಂಗಡಗಳಾಗಿ ನಿರ್ಮಾಣವಾಯಿತು ಅವುಗಳೆಂದರೆ ದಿಗಂಬರರು ಮತ್ತು ಶ್ವೇತಾಂಬರರು

**ದಿಗಂಬರರ ಸಂಪ್ರದಾಯ**

ಈ ಸಂಪ್ರದಾಯದ ಸಾಧುಗಳು ತಪಸ್ಸಿನ ಸ್ಥಿತಿಯಲ್ಲಿ ನಗ್ನರಾಗಿರುತ್ತಾರೆ, ಇದರಿಂದ ಕಾಮನನ್ನು ಗೆಲ್ಲುವುದೆಂಬುದು ಇವರ ಮನೋಭಾವನೆ. ದಿಗಂಬರರಲ್ಲಿ ಸ್ತ್ರೀ ಜನ್ಮದಲ್ಲಿ ಮೋಕ್ಷ ದೊರೆಯುವುದಿಲ್ಲ. ಆಕೆ ಪುರುಷ ಜನ್ಮ ಪಡೆದು ಅನಂತರ ಮೋಕ್ಷ ಪಡೆಯಬಲ್ಲಳು ಎಂಬುದನ್ನು ತಿಳಿಸುವರು ,ಇವರು ಸೂಕ್ಷ್ಮಜೀವಿಗಳಿಂದ ದೂರ ಇರಲು ತಮ್ಮ ಬಳಿನವಿಲುಗರಿಗಳನ್ನು ಇಟ್ಟುಕೊಂಡಿರುತ್ತಾರೆ .ಇವರು

ದಿನಕ್ಕೊಮ್ಮೆ ಎದ್ದು ತಮ್ಮ ಕರಪಾತ್ರದಿಂದಲೇ ಆಹಾರ ತೆಗೆದುಕೊಳ್ಳುವರು ಭೋಜನಕ್ಕಾಗಿ ಬೇರೆ ಪಾತ್ರೆಯನ್ನು ಉಪಯೋಗಿಸುವುದಿಲ್ಲ. ಸಾಧುಗಳ ಸ್ವರ ಸ್ವರೂಪವೂ ಮೊದಲಿನಿಂದಲೂ ಹೀಗೆ ಇದೆ ಮುನಿಗಳು ಮೊದಲು ಗುಹೆಗಳಲ್ಲಿ, ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಕಾಲ ಬದಲಾದಂತೆ ಬಸದಿಗಳಲ್ಲಿ ವಾಸಿಸುತ್ತಿದ್ದಾರೆ. ವಾಸಸ್ಥಾನ ಇತ್ತೀಚೆಗೆ ಕೆಲವು ಬದಲಾವಣೆಗಳಾಗಿವೆ. ಇದನ್ನು ಗಮನಿಸಿದ ಆಚಾರ್ಯ ಗುಣ ಭದ್ರರು ತನ್ನ ಆತ್ಮಾನು ಶಾಸನದಲ್ಲಿ ಬೇಸರವನ್ನು ವ್ಯಕ್ತಪಡಿಸಿದನು ಮತ್ತು ತನ್ನ ಸುತ್ತಲಿನ ಪರಿಸ್ಥಿತಿಯು ಮಾನವನ ಸ್ವಾಭಾವಿಕ ದುರ್ಬಲತೆಯು ಅದಕ್ಕೆ ಪ್ರೋತ್ಸಾಹವನ್ನು ಕೊಡುತ್ತದೆ ಎಂದು ಹರಿತನು ಹಾಗೆಯೇ ಶಿವಕೋಟ್ಯಾಚಾರ್ಯರ ಹೆಸರಿನಿಂದ ಪ್ರಸಿದ್ಧವಿರುವ ರತ್ನಮಾಲದಲ್ಲಿ ಮುನಿಗಳು ಅರಣ್ಯ ಗುಹೆಗಳನ್ನು ಬಿಟ್ಟು ಜಿನ ಮಂದಿರಗಳು ಅಥವಾ ಜೈನ ಬಸದಿಗಳಲ್ಲಿ ವಾಸಿಸುವ ನಿಯಮವನ್ನು ಮಾಡಿದರು.

‘ಕಲೌ ಕಾಲೇ ವನೇ ವಾಸೋ ವಜ್ಯ9ತೇ ಮುನಿಸತಮ್ಯೈಃ
ಸ್ಥೀಯತೇ ಚ ಜಿನಾಗಾರೇ ಗ್ರಾಮಾದಿಷು ವಿಶೇಷತಃ’
–ರತ್ನಮಾಲಾ

ಇದನ್ನು ಚೈತನ್ಯ ವಾಸ ಎನ್ನುವರು ಇದರಿಂದ ಶ್ವೇತಾಂಬರರಲ್ಲಿ ಚೈತ್ಯವಾಸಿ ಅಂತ ಉತ್ಪತ್ತಿಯಾಯಿತು ಆದರೆ ದಿಗಂಬರ ಸಂಪ್ರದಾಯದಲ್ಲಿ ಈ ಪಂಥದ ಉಲ್ಲೇಖವು ಎಲ್ಲಿಯೂ ಇಲ್ಲ .ಆದರೂ ದಿಗಂಬರಲ್ಲಿಯೂ ಅದು ಇರಬಹುದು ಎಂದು ಊಹಿಸಲಾಗಿದೆ ಅದರ ವಿಕಸಿತ ಒಂದು ರೂಪವೇ ಭಟ್ಟಾರಕ ಪದವಾಗಿದೆ ಇದಕ್ಕೆ ವಿರೋಧಿಯಾಗಿ ಇದರ ಪಂತ ಉದ್ಭವಾಯಿತು.

**ಶ್ವೇತಾಂಬರ ಸಂಪ್ರದಾಯ**

ಈ ಪಂಗಡದವರು ಬಿಳಿ ವಸ್ತ್ರವನ್ನ ಧರಿಸುವರು, ಆದರೆ ಇವರು ಪ್ರಾಚೀನ ಕಾಲದಲ್ಲಿ ದಂಡ ರಾಗಿದ್ದರು ನಂತರ ಆರು ಏಳನೇ ಶತಮಾನದ ನಂತರದಲ್ಲಿ ಇವರು ವಸ್ತ್ರಗಳನ್ನು ಧರಿಸಿ ತೊಡಗಿದರು. ಇಷ್ಟೇ ಅಲ್ಲದೆ ಜಿನಮೂರ್ತಿಗಳನ್ನು ವಸ್ತ್ರಾಭರಣಗಳಿಂದ ಸಿಂಗರಿಸುವ ಬಳಕೆಯಾಯಿತು ಶ್ವೇತಾಂಬರ ಸಂಪ್ರದಾಯದವರು ಸ್ತ್ರೀಯರಿಗೂ ಮುಕ್ತಿ ಇದೆ ಎಂದು ಸ್ವೀಕರಿಸಿದರು .ಕೇವಲ ಭೋಜನ ಮಾಡುವವರೆಂದು ಹೇಳುವರು ಈ ಎರಡು ಹೇಳಿಕೆಗಳನ್ನು ದಿಗಂಬರರು ಒಪ್ಪುವುದಿಲ್ಲ ಹೀಗೆ ಇಂತಹ ವಿಷಯಗಳಿಂದ ಶ್ವೇತಾಂಬರ ಮತ್ತು ದಿಗಂಬರರ ನಡುವೆ ವ್ಯತ್ಯಾಸವಿರುವುದನ್ನು ಕಾಣಬಹುದು ಕೇವಲ ಕಮಲಹಾರ ,ಸ್ತ್ರೀ ಮುಕ್ತಿ ,ಶೂದ್ರ ಮುಕ್ತಿ ,ವಸ್ತ್ರಸಹಿತ ಮುಕ್ತಿ ,ಅಲಂಕಾರ ,ಪ್ರತಿಮೆಗಳ ಪೂಜೆ ,ಭರತ

ಚಕ್ರವರ್ತಿಗೆ ಮನೆಯಲ್ಲಿಯೇ ಕೇವಲ ಜ್ಞಾನ ,ಶೂದ್ರರ ಮನೆಯಲ್ಲಿ ಮುನಿಗಳ ಆಹಾರ ಸ್ವೀಕಾರ, ಮಹಾವೀರನ ವಿವಾಹ ಹೀಗೆ ಇನ್ನು ಮುಂತಾದ ವಿಚಾರಗಳಿಂದ ಶ್ವೇತಾಂಬರರು ದಿಗಂಬರರಿಗಿಂತ ವಿಭಿನ್ನರಾಗಿದ್ದಾರೆ.

ಒಟ್ಟಾರೆಯಾಗಿ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮವು ಅತ್ಯುನ್ನತವಾದ ಧರ್ಮವಾಗಿ ರೂಪುಗೊಂಡು ಸಾಮಾನ್ಯ ಜನರು ಸ್ವೀಕರಿಸುವಂತಹ ಸರಳ ಆಚರಣೆಗಳ ಧರ್ಮವಾಗಿದ್ದು ಮೋಕ್ಷ ಸಾಧನೆಗೆ ಸುಲಭ ಮಾರ್ಗದ ಮೂಲಕ ದೀಕ್ಷೆಯನ್ನು ಪಡೆಯುವಲ್ಲಿ ಆರನೇ ಶತಮಾನದಲ್ಲಿ ದೊರೆತಂತಹ ಧರ್ಮವಾಗಿದ್ದು ಮನುಷ್ಯರನ್ನು ಇಂದ್ರಿಯಗಳಿಂದ ನಿಗ್ರಹಿಸಿ ಹಲವು ವ್ರತಗಳ ಅನುಸರಣೆಗೆ ದಾರಿದೀಪವಾಗಿದೆ ಧರ್ಮವೂ ಮಾನವನ ಮೋಕ್ಷ ಸಾಧನೆಗೆ ಮಾರ್ಗವಾಗಿದೆ.

**ಗ್ರಂಥ ಋಣ**

1. ಜೈನ ಧರ್ಮ, ಶಾಂತಿ ಸೇವಾ ಸದನ 1952–ಮಿರ್ಜಿ ಅಣ್ಣಾರಾಯ.

2. ತೀರ್ಥಂಕರ ವರ್ಧಮಾನ–2011 ಸಣ್ಣಯ್ಯ ಬಿ.ಎಸ್

3. ಕನ್ನಡದಲ್ಲಿ ವರ್ಧಮಾನ ಸಾಹಿತ್ಯ –ಡಾ .ವೈ .ಸಿ ಭಾನುಮತಿ

4. ಕರ್ನಾಟಕದಲ್ಲಿ ಶ್ವೇತಾಂಬರ ಜೈನ ಸಮಾಜ ಸಾಂಸ್ಕೃತಿಕ ಅಧ್ಯಯನ –ಡಾ.ಎನ್.ಚಿನ್ನಸ್ವಾಮಿ ಸೋಸಲೆ

5. ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ– ಮಿರ್ಜಿ ಅಣ್ಣಾರಾಯ